# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 26 (122) |
| ಸದಸ್ಯರ ಹೆಸರು | ಡಾ.ಕೆ.ಗೋವಿಂದರಾಜ್ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 17.08.2026. |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಡಾ: ಬಿ.ಆರ್ ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿ ಆರಂಭವಾದಾಗ ಘೋಷಿಸಿದ ಅನುದಾನವೆಷ್ಟು; ಇದುವರೆವಿಗೂ ಬಿಡುಗಡೆಯಾಗಿರುವ ಅನುದಾನವೆಷ್ಟು, (ವಿವರ ನೀಡುವುದು); | ಸರ್ಕಾರದ ಆದೇಶ ಸಂಖ್ಯೆ: ಇಡಿ 61 ಯುಬಿವಿ 2016, ದಿನಾಂಕ : 16.02.2017ರನ್ವಯ ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯನ್ನು ಸ್ವಾಯತ್ತ ಸಂಸ್ಥೆಯಾಗಿ 2017-18 ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಆದೇಶಿಸಲಾಗಿದೆ. ಸಂಸ್ಥೆಯ ಸ್ಥಾಪನೆಗಾಗಿ ರೂ.150.00ಕೋಟಿಗಳ ಮೂಲಧನ (Corpus Fund) ನಿಗಧಿಪಡಿಸಲಾಗಿದ್ದು, ಈ ಪೈಕಿ ರೂ.75.00ಕೋಟಿಗಳ ಹಣವನ್ನು ಮುಂದಿನ 5 ವರ್ಷಗಳ ಅವಧಿಯಲ್ಲಿ ಹಂತ ಹಂತವಾಗಿ ಸರ್ಕಾರದಿಂದ ಬಿಡುಗಡೆಗೊಳಿಸಲು ಘೋಷಿಸಿ, ಉಳಿದ ಹಣವನ್ನು ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ವಿವಿಧ ಮೂಲಗಳಿಂದ ದೇಣಿಗೆ ಸಂಗ್ರಹಿಸುವ ವ್ಯವಸ್ಥೆಯನ್ನು ರೂಪಿಸುವ ಮೂಲಕ ಬೆಂಗಳೂರು ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯಿಂದ ಹೊಂದಿಸಿಕೊಳ್ಳಲು ತಿಳಿಸಲಾಗಿತ್ತು. ಆದರೆ, ಘೋಷಿಸಲಾಗಿದ್ದ ಮೂಲಧನ (Corpus Fund) ಬಿಡುಗಡೆಗೊಂಡಿರುವುದಿಲ್ಲ. ಆದ್ದರಿಂದ ಮೂಲಧನ (Corpus Fund) ರೂ.75.00 ಕೋಟಿ ಬಾಕಿ ಇರುತ್ತದೆ.<br><br>ವಿಶ್ವವಿದ್ಯಾಲಯದ ಕಾರ್ಯನಿರ್ವಹಣೆಗಾಗಿ 2018-19ನೇ ಸಾಲಿನಿಂದ 5 ವರ್ಷಗಳ ಕಾಲಮಿತಿಯೊಳಗೆ ಪ್ರತಿ ವರ್ಷ ರೂ.10.00 ಕೋಟಿಗಳಂತೆ ಒಟ್ಟು ರೂ.50.00ಕೋಟಿಗಳ ಆವರ್ತಕ ಅನುದಾನವನ್ನು ಬಿಡುಗಡೆಗೊಳಿಸಲಾಗುವುದೆಂದು ಆದೇಶಿಸಿದ್ದು, ಈ ಪೈಕಿ ಸರ್ಕಾರದ ಆದೇಶ ಸಂಖ್ಯೆ: ಇಡಿ 35 ಯುಬಿವಿ 2018 ದಿನಾಂಕ. 01.01.2019ರಲ್ಲಿ ರೂ. 5.00ಕೋಟಿಗಳ ಆವರ್ತಕ ಅನುದಾನವನ್ನು ಬಿಡುಗಡೆಗೊಳಿಸಿರುತ್ತದೆ. ರೂ.45.00ಕೋಟಿಗಳ ಆವರ್ತಕ ಅನುದಾನ ಬಾಕಿ ಇರುತ್ತದೆ. |
| ಆ) | ವಿಶ್ವವಿದ್ಯಾಲಯದಲ್ಲಿ ಭೋದಕ ಮತ್ತು ಭೋದಕೇತರ ಮಂಜೂರಾದ ಹುದ್ದೆಗಳೆಷ್ಟು; (ವ್ಯಂದವಾರು ಮಾಹಿತಿ ನೀಡುವುದು); | ವಿಶ್ವವಿದ್ಯಾಲಯದಲ್ಲಿ ಮಂಜೂರಾದ ಭೋದಕ ಮತ್ತು ಭೋದಕೇತರ ಹುದ್ದೆಗಳ ವ್ಯಂದವಾರು ಮಾಹಿತಿ ಈ ಕೆಳಕಂಡಂತಿದೆ:- |

| ಬೋಧಕ ಹುದ್ದೆಗಳ ವಿವರ | ಮಂಜೂರಾದ ಹುದ್ದೆಗಳ ಸಂಖ್ಯೆ |
|---|---|
| ಪ್ರಾಧ್ಯಾಪಕರು | 02 |
| ದೈಹಿಕ ಶಿಕ್ಷಣ ನಿರ್ದೇಶಕ, | 01 |
| ಸಹ ಪ್ರಾಧ್ಯಾಪಕರು | 03 |
| ಸಹಾಯಕ ಪ್ರಾಧ್ಯಾಪಕರು | 10 |
| ಸಹಾಯಕ ಗ್ರಂಥಪಾಲಕ | 01 |
| ಒಟ್ಟು | **17** |
| **ಭೋದಕೇತರ ಹುದ್ದೆಗಳ ವಿವರ** | |

| | | | |
|---|---|---|---|
| | | ಸಹಾಯಕ ಕುಲಸಚಿವರು | 02 |
| | | ಕುಲಪತಿಗಳ ಅಪ್ತಕಾರ್ಯದರ್ಶಿ | 01 |
| | | ಕುಲಸಚಿವರ ಅಪ್ತಕಾರ್ಯದರ್ಶಿ | 01 |
| | | ಸಹಾಯಕ ಅಭಿಯಂತರರು- | 01 |
| | | ಕಛೇರಿ ಅಧೀಕ್ಷಕರು | 03 |
| | | ಲೆಕ್ಕ ಅಧೀಕ್ಷಕರು | 02 |
| | | ಶೀಘ್ರಲಿಪಿಗಾರರು/ಅಪ್ತಸಹಾಯಕರು | 03 |
| | | ಸಹಾಯಕ/ಎಫ್‌ಡಿಎ | 06 |
| | | ಕಿರಿಯ ಸಹಾಯಕರು/ಎಸ್‌ಡಿಎ | 09 |
| | | ಕಿರಿಯಅಭಿಯಂತರರು(ಎಲೆಕ್ಟ್ರಿಕಲ್) | 01 |
| | | ಗ್ರಂಥಾಲಯ ಸಹಾಯಕರು | 02 |
| | | ಸಿಸ್ಟಮ್ ಅನಾಲಿಸ್ಟ್ (ಗುತ್ತಿಗೆ) | 01 |
| | | ಐಟಿ ತಂತ್ರಜ್ಞ (ಗುತ್ತಿಗೆ) | 01 |
| | | ಡಾಟಾ ಎಂಟ್ರಿ ಆಪರೇಟರ್ (ಹೊರಗುತ್ತಿಗೆ) | 02 |
| | | ಚಾಲಕರು (ಹೊರಗುತ್ತಿಗೆ) | 03 |
| | | ಗ್ರೂಪ್-ಡಿ /ದಲಾಯತ್ (ಹೊರಗುತ್ತಿಗೆ) | 11 |
| | | **ಒಟ್ಟು** | **49** |
| ಇ) | ಇದುವರೆವಿಗೂ ಎಷ್ಟು ಭೋದಕ ಮತ್ತು ಭೋದಕೇತರ ಖಾಯಂ ಸಿಬ್ಬಂದಿಗಳು ನೇಮಕಗೊಂಡಿದ್ದಾರೆ; ಗುತ್ತಿಗೆ ಮತ್ತು ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಸಿಬ್ಬಂದಿಗಳೆಷ್ಟು? (ಮಾಹಿತಿ ಒದಗಿಸುವುದು) | ಪ್ರಸ್ತುತ ಈ ವಿಶ್ವವಿದ್ಯಾಲಯದಲ್ಲಿ ಯಾವುದೇ ಬೋಧಕ/ಭೋದಕೇತರ ಖಾಯಂ ಹುದ್ದೆಗಳು ಭರ್ತಿಯಾಗಿರುವುದಿಲ್ಲ.<br><br>15 ಸಹಾಯಕ ಪ್ರಾಧ್ಯಾಪಕರು ಗುತ್ತಿಗೆ ಆಧಾರದ ಮೇಲೆ 11 ತಿಂಗಳ ಅವಧಿಗೆ ನೇಮಿಸಿಕೊಳ್ಳಲಾಗಿದೆ.<br>ಗುತ್ತಿಗೆ ಆಧಾರದ ಮೇಲೆ 4 ಸಮಾಲೋಚಕರುಗಳನ್ನು ನೇಮಿಸಿಕೊಳ್ಳಲಾಗಿದೆ.<br><br>ಕಛೇರಿ ಕೆಲಸ ಕಾರ್ಯಗಳನ್ನು ನಿರ್ವಹಿಸಲು 26 ಜನರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ.<br>23 ಸೆಕ್ಯೂರಿಟಿ ಗಾರ್ಡ್‌ಗಳು ಮತ್ತು 22 ಹೌಸ್ ಕೀಪರ್ ಗಳನ್ನು ಟೆಂಡರ್ ಮೂಲಕ ಪಡೆಯಲಾಗಿದೆ.<br><br>2026-27ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 121ರಲ್ಲಿ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ 1,000 ಬೋಧಕ ಹುದ್ದೆಗಳನ್ನು ತರ್ಕಬದ್ಧಗೊಳಿಸಿ ಹಂತ ಹಂತವಾಗಿ ಭರ್ತಿ ಮಾಡಿಕೊಳ್ಳಲಾಗುವುದೆಂದು ಘೋಷಿಸಲಾಗಿದೆ. |

ಸಂಖ್ಯೆ: ಇಡಿ 117 ಹೆಚ್‌ಪಿಯು 2026)

(ಬಸವರಾಜ ರಾಯರೆಡ್ಡಿ)
ಉನ್ನತ ಶಿಕ್ಷಣ ಸಚಿವರು